IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 12, 2021

# ಹಳಗನ್ನಡ ಕಾವ್ಯಗಳ ಸ್ವರೂಪ :

**ಡಾ.ವೈ.ಚಂದ್ರಬಾಬು,**

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಳಗನ್ನಡ ಕಾವ್ಯಗಳ ರಚನಾಯುಗ, ಕನ್ನಡಕ್ಕೆ ಜಾಗತಿಕ ಮಹತ್ವವನ್ನು ಬಹಳ ಪ್ರಾಚೀನ ಕಾಲದ ಹಿಂದೆಯೇ ತಂದು ಕೊಟ್ಟ ಸುವರ್ಣಯುಗ. ಭಾಷಾ ದೃಷ್ಟಿಯಿಂದಲೂ ಕನ್ನಡಕ್ಕೆ ಅಧಿಕೃತ ಪ್ರಾಚೀನತೆಯನ್ನು ತಂದು ಕೊಟ್ಟಿದೆ. ರಾಷ್ಟ್ರೀಯ ಮಾನ್ಯತೆಯ ಶಾಸ್ತ್ರೀಯ ಭಾಷಾ ಸ್ಥಾನವನ್ನು ಘೋಷಿಸಲು ಐತಿಹಾಸಿಕ ಮಹತ್ವವನ್ನು ನಿದರ್ಶನಗಳ ಮೂಲಕ ಈ ಕಾಲದ ಕೃತಿಗಳು ನೀಡಿದೆ. ಹಳೆಯ ಕಾವ್ಯಗಳು, ಅವುಗಳ ಸ್ವರೂಪ ಕುರಿತು ಇತಿಹಾಸದ ಕುರುಹುಗಳು ದೊರೆತರೂ, ಒಂಬತ್ತನೆಯ ಶತಮಾನದ(ಕ್ರಿ.ಶ.ಸು.850) ಕೃತಿ ಎನ್ನುವ ಕವಿರಾಜಮಾರ್ಗ ಗ್ರಂಥ, ಕನ್ನಡದ ಮೊದಲ ಉಪಲಬ್ದ ದಾಖಲೆಯ ಕೃತಿಯಾಗಿ, ಅಲಂಕಾರಕಾವ್ಯ ಎಂಬ ಮಾನ್ಯತೆಯನ್ನು ಪಡೆದಿದೆ.

ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದ ಗದ್ಯ ಕವಿಗಳು; ಶ್ರೀವಿಜಯ, ಪಂಡಿತ(ಪಂಡಿತ ಖ್ಯಾತಿಯ ಕವಿ ಇರಬಹುದು)ಕವೀಶ್ವರ, ಚಂದ್ರ, ಲೋಕಪಾಲರಂತಹ ಪದ್ಯ ಕವಿಗಳು ಇದ್ದರೆಂದು ಕವಿ ಪರಂಪರೆಯ ವಿವರಗಳನ್ನು ಕವಿರಾಜಮಾರ್ಗ ಕೃತಿಯಲ್ಲಿ ವಿವರಿಸಲಾಗಿದೆ. ಚತ್ತಾಣ, ಬೆದಂಡೆ, ಒನಕೆವಾಡು, ಪಗರಣಗಳೆಂಬ ಜಾನಪದೀಯ ಸಾಹಿತ್ಯ ಮತ್ತು ಕಲೆಗಳು ಕನ್ನಡಿಗರ ಪ್ರಾಚೀನ ಸಾಹಿತ್ಯದ ಭಾಗಗಳಾಗಿ ಪ್ರಚಾರದಲ್ಲಿತ್ತು ಎಂಬ ಮಹತ್ವದ ವಿವರಗಳು ಇದೇ ಕವಿರಾಜಮಾರ್ಗ ಕೃತಿಯಲ್ಲಿನ ಇತಿಹಾಸಪ್ರಜ್ಞೆಗೆ ಸಾಕ್ಷಿ. ಆ ಕಾವ್ಯದಲ್ಲಿ ಕವಿ ಶ್ರೀವಿಜಯನು "ಆ ನಾಡವರ್ಗಳ್ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ಕನ್ನಡ ಜನರ ಕಾವ್ಯ ಪ್ರೀತಿಯನ್ನು, ರಚನಾ ಸಾಮರ್ಥ್ಯವನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ. ಅದಲ್ಲದೆ, ಕನ್ನಡ ನಾಡು, ನುಡಿಯ, ಜನ, ಸಂಸ್ಕೃತಿಗಳ ವಿವರಣೆಯನ್ನು ಪಡೆದಿರುವ ಮಹತ್ವದ ಕೃತಿ ಇದಾಗಿದೆ. ಕನ್ನಡ ಭಾಷೆ, ಛಂದಸ್ಸು, ಕವಿ– ಕಾವ್ಯಗಳ ವೈಶಿಷ್ಟ್ಯಗಳನ್ನು ಸಹ ತಿಳಿಸುವ ಕನ್ನಡಕ್ಕೆ ಮೇರು ಶಿಖರದಂತಿರುವ ಕಾವ್ಯ ಇದೇ ಆಗಿದೆ, ಬೇರೆ ಕೃತಿಗಳ ಆಧಾರ ಇಲ್ಲಿ ಅಷ್ಟಾಗಿ ಗೌಣ.

"ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ" ಎಂಬ ಮಾತುಗಳಲ್ಲಿ ರಾಷ್ಟ್ರ ಕೂಟ ಅರಸರ ಕಾಲದಲ್ಲಿದ್ದ ಕನ್ನಡ ಭೂ ನಕ್ಷೆಯ ಪರಿಚಯವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ.

"ಅದಱೊಳಗಂ ಕಿಸುವೊೞಲಾ
ವಿದಿತ ಮಹಾ ಕೊಪಣ ನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್" ಎನ್ನುವ ವಿವರಣೆಯಲ್ಲಿ, ಯಾವುದೇ ನಾಡು ದೇಶಗಳಲ್ಲಿ ದ್ವಿಭಾಷಿಕರು, ಬಹುಭಾಷಿಕರು ಇರುವುದು ಸಹಜ ಇಡೀ ದಕ್ಷಿಣ ಭಾರತದ ಹೆಚ್ಚಿನ ಪ್ರದೇಶಗಳು ರಾಷ್ಟ್ರಕೂಟರ ಕಾಲಕ್ಕೆ ಕನ್ನಡದ್ದೇ ಪ್ರದೇಶಗಳಾಗಿದ್ದವು. ಆದರೂ ಸ್ವಚ್ಛ ಕನ್ನಡ ಸಂಸ್ಕೃತಿ, ಭಾಷೆಯ ಸೀಮೆಗಳು, ಈಗಿನ ಪಟ್ಟದಕಲ್ಲು(ಕಿಸುವೊೞಲಾ),ಕೊಪ್ಪಳ(ಕೊಪಣ),ಲಕ್ಷ್ಮೇಶ್ವರ(ಪುಲಿಗೆಱೆಯಾ) ಮತ್ತು ಒಕ್ಕುಂದಗಳ(ಬೆಳಗಾವಿಯ ಸಮೀಪದ ಒಂಕುಂದದ) ಪ್ರದೇಶಗಳನ್ನು ತಿರುಳ್ಗನ್ನಡ ಪ್ರದೇಶಗಳಾಗಿ ಗುರುತಿಸಿರುವುದು ಕವಿರಾಜಮಾರ್ಗ ಗ್ರಂಥದ ವಿಶೇಷ.

ISSN PRINT 2319 1775 Online 2320 7876
*Research Paper* © 2012 IJFANS. All Rights Reserved, UGC CARE Listed ( Group -I) Journal Volume 10, Iss 12, 2021

ಶ್ರೀ ವಿಜಯನಿಗೆ ಕನ್ನಡದಲ್ಲಿ ಎಲ್ಲವನ್ನೂ ಕಾಣುವ ಸಹೃದಯತೆಯಿತ್ತು. ಕನ್ನಡ ನುಡಿಯ ಬಗ್ಗೆ ಮಮತೆ, ಶ್ರದ್ಧೆ, ಭಾವುಕತೆ, ಉತ್ಸಾಹ, ಅಭಿಮಾನಗಳ ಜೊತೆಗೆ ಚಾರಿತ್ರಿಕ ಪ್ರಜ್ಞೆ ಇಮ್ಮಡಿಸಿತ್ತು. **"ಕಸವರವೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮಂ, ಧರ್ಮಮುಮಂ, ಕಸವೇಂ ಕಸವರಮೇನು ಬ್ಬಸಮಂ ಬಸಂಮಲ್ಲದಿರ್ದು ಮಾಡುವರೆಲ್ಲ" ಪೊಲ್ಲಮೆಯುಂ ಗುಣಮುಂ ತಮಗಲ್ಲದೆ ಪುದುವಲ್ಲ ಮತ್ತೆ ತನಗುಂ ಪೆಱರ್ಗಂ ನಿಲ್ಲದೆ ಜನಮುಂತಾಗಿಯುಮೆಲ್ಲಂ ಮುನಿಸೊಸಗೆವೆರಸು ಪೞಿಗುಂ ಪೊಗೞ್ಗುಂ" ಎಂಬ** ಚಿಂತನೆಗಳಲ್ಲಿ ಭಾರತೀಯ ಸಂಸ್ಕೃತಿಯಲ್ಲಿನ ಸಾಮರಸ್ಯತೆಗೆ ಕನ್ನಡಿ ಹಿಡಿದಂತೆ ಉಪದೇಶವನ್ನು ನೀಡಿ ಸಾರ್ವಕಾಲಿಕ ಮೌಲ್ಯಗಳಾಗಿ ಅವರ ಕೃತಿಯ ಮಹತ್ವವನ್ನು ಎತ್ತಿ ನಿಲ್ಲಿಸಿದ್ದಾರೆ.

ಹಳಗನ್ನಡ ಕಾವ್ಯಗಳಲ್ಲಿ ವಡ್ಡಾರಾಧನೆ ಮತ್ತೊಂದು ಐತಿಹಾಸಿಕ ದಾಖಲೆ. ಕನ್ನಡದ ಮೊದಲ ಗದ್ಯ ಕೃತಿಯಾಗಿ ಜೈನ ಸಂಸ್ಕೃತಿ ಮತ್ತು ಕಾವ್ಯ ಸಂಸ್ಕೃತಿಗೆ ಬುನಾದಿ ಹಾಕಿದ ಜಾನಪದೀಯ ಕಥಾಮೃತ ಇದಾಗಿದೆ. ಕೃತಿರಚನೆ, ಕಾಲದ ಬಗ್ಗೆ ಗೊಂದಲಗಳಿದ್ದರೂ, ಈ ಗ್ರಂಥ ಕನ್ನಡ ಸಂಸ್ಕೃತಿಗೆ ಕಿರೀಟವೇ ಸರಿ. ಅಹಿಂಸೆ, ವೈರಾಗ್ಯ, ಭೋಗದ ನಶ್ವರತೆಗಳನ್ನು ಬೋಧಿಸುವ ಈ ಕೃತಿಯನ್ನು ಶಿವಕೋಟ್ಯಾಚಾರ್ಯರು ರಚಿಸಿದ್ದು, ಆರಾಧನೆಯ ಕೈವಲ್ಯ ಅಥವಾ ಉಪಸರ್ಗಕೇವಲಿಗಳ ಕಥೆ ಎನ್ನಲಾಗುತ್ತಿದೆ. ಪೂರ್ವದ ಹಳಗನ್ನಡ ಎಂದು ಹೇಳಲು ಆಧಾರಗಳಿದ್ದರೂ ಸರಳ ಕನ್ನಡದ ಭವಾವಳಿಗಳ ಕಥೆ ಇದು. ಹತ್ತೊಂಬತ್ತು ಜೈನ ಭಟ್ಟಾರರ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಇದು ಪ್ರಾಕೃತ, ಸಂಸ್ಕೃತಗಳ ಪ್ರಭಾವಕ್ಕೆ ಒಳಗಾಗಿದ್ದು, ನೀತಿ ಕಥೆಗಳ ಜೈನ ಧಾರ್ಮಿಕ ಗ್ರಂಥವಾಗಿದೆ.

ಹತ್ತನೆಯ ಶತಮಾನ ಮತ್ತು ನಂತರದ ಹಳಗನ್ನಡ ಕಾವ್ಯಗಳು ಕಾವ್ಯ ಧರ್ಮವನ್ನು ಧರ್ಮವನ್ನು ಏಕ ಕಾಲಕ್ಕೆ ಪಸರಿಸಿದ ಮಣಿದರ್ಪಣಗಳು. ಧಾರ್ಮಿಕ ಮಹತ್ವಕ್ಕೇ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವ ಹಿಂದಿನ ಕಾಲದಲ್ಲಿ ಧರ್ಮ ಮತ್ತು ರಾಜನಿಷ್ಠೆ ಪ್ರಮುಖ ಮಾನದಂಡಗಳು. ರಾಜರು, ಕವಿ ಮತ್ತು ಕಲಾವಿದರ ಪೋಷಕರಾದರಿಂದ ರಾಜ ಪೋಷಣೆಯ ಧಾರ್ಮಿಕ ಒಲವು ಹಾಗೂ ಸಮಕಾಲೀನ ರಾಜಮೌಲ್ಯಗಳೆಂದು ಗುರುತಿಸುವ ಪರಾಕ್ರಮ, ಕಲಿತನಕ್ಕೆ ಹೆಚ್ಚು ಮಾನ್ಯತೆಯಿತ್ತು. ಆ ರೀತಿಯ ಕಾವ್ಯಗಳಿಗೆ ಹಳಗನ್ನಡ ಕಾವ್ಯಗಳು ಉತ್ತಮ ಉದಾಹರಣೆಯಾಗಿ ಬೆಳೆದವು. ಅಷ್ಟೇ ಅಲ್ಲದೆ, ಜೀವನಮೌಲ್ಯಗಳು, ಮಾನವ ಸಹಜ ಸ್ವಭಾವಗಳ ಅನಾವರಣ, ಹಳಗನ್ನಡ ಕಾವ್ಯಗಳ ಜೀವಂತಿಕೆಯ ಹೂರಣ ಎಂದರೆ ತಪ್ಪಾಗಲಾರದು.

ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನ ಕಥಾನಾಯಕನಾದರೂ, ಪಂಪ "ನೆನೆಯುವೊಡೆ ಕರ್ಣನಂ ನೆನೆ... ಕರ್ಣರಸಾಯನಮಲ್ತೆ ಭಾರತಂ" ಕರ್ಣನ ನನ್ನೀ, ಕರ್ಣನ ಅದಟು, ಕರ್ಣನ ಚಾಗ, ಎಂದು ಅದ್ಭುತ ಗುಣಗಳನ್ನು ವರ್ಣಿಸುತ್ತಾನೆ. ಅರ್ಜುನನ ಕಲಿತನಕ್ಕಿಂತಲೂ ಪಂಪ ಕವಿಯ ಮನಸ್ಸನ್ನು ಸೂರೆಗೊಂಡಿರುವುದು, ಕರ್ಣನ ಉದಾರ ವ್ಯಕ್ತಿತ್ವದ ಕಡೆಗೆ ಎಂದು ಹೇಳಬಹುದು. ಅದರಲ್ಲೂ ಬರೀ ಪರಾಕ್ರಮವಷ್ಟೇ ಜೀವನ ಮೌಲ್ಯವಾಗುವುದಿಲ್ಲ. ಮಾನವ ವ್ಯಕ್ತಿತ್ವವನ್ನು ಕಟ್ಟಲು ಎಲ್ಲಾ ರೀತಿಯ ಮಾನವಿಕ ಸಮಗ್ರ ಸಾಧನಗಳು ಕವಿಯಾದವನ ಆಭರಣಗಳಾಗುತ್ತವೆ. ಪಂಪ ಕವಿ ಅದನ್ನು ರೂಪಿಸಲು ಬೇಕಾದ ಕವಿಮಾರ್ಗವನ್ನು ತನ್ನ ಕೃತಿಗಳ ಮೂಲಕ ಕಂಡುಕೊಳ್ಳುತ್ತಾನೆ. ಅದರ ರೂಪಕವೇ ತನ್ನ ಕಾವ್ಯದ ನಾಯಕ, ಅರಿಕೇಸರಿ–ಅರ್ಜುನನಾದರೂ ಸಮಾಜಕ್ಕೆ ಬೇಕಾದ ಮೌಲ್ಯಗಳು ಕರ್ಣನಲ್ಲಿ ದಟ್ಟವಾಗಿದೆಂದು ನಿರೂಪಿಸುತ್ತಾನೆ. ಆ ದೃಷ್ಟಿಕೋನದಿಂದಲೇ ಅರಿಕೇಸರಿ–ಅರ್ಜುನನ ಚರಿತ್ರೆ, ಕರ್ಣರಸಾಯನಂ ಆಯಿತು. " ಮನುಷ್ಯ ಜಾತಿ ತಾನೊಂದೆ ವಲಂ" ಎಂದು ಹೇಳುವ ಪಂಪನಿಗೆ ರಾಜಪರಂಪರೆಯಲ್ಲಿಯೂ ಮನುಷ್ಯ ಪರಂಪರೆಯ ಮೌಲ್ಯಗಳು ಪ್ರಧಾನವಾಗಿದ್ದವು. ಇಂತಹ ಹೇಳಿಕೆಗಳನ್ನು ಬೆರೆಸಿರುವುದೇ ಆತನ ಕವಿತ್ವಕ್ಕೆ ಸಾರ್ವಕಾಲಿಕ ಮತ್ತು ಮಹತ್ವವನ್ನು ತಂದುಕೊಟ್ಟಿದೆ. ಪಂಪನಿಂದ ಹಳಗನ್ನಡ ಕಾವ್ಯ ಪರಂಪರೆ ಸ್ಪಷ್ಟ ದಾರಿಯನ್ನು ಹಿಡಿಯಲು ಸಾಧ್ಯವಾಗುತ್ತದೆ.

ಭಾಷಾ ದೃಷ್ಟಿಯಿಂದಲೂ ಹಳಗನ್ನಡ ಕಾವ್ಯಗಳು ಸೊಗಸು, ನಾಜೂಕುತನಗಳಿಗೆ ಮಹತ್ವವನ್ನು ಕೊಡುತ್ತವೆ. ಸಂಸ್ಕೃತದಲ್ಲಿ ಹೆಚ್ಚು ಪ್ರಚಲಿತ ಎನ್ನುವ ಚೆಂಪೂ ಶೈಲಿ ಕನ್ನಡಕ್ಕೆ ಅಂದ. ಸಂಸ್ಕೃತಕ್ಕಿಂತಲೂ ಕನ್ನಡ ಕಾವ್ಯಗಳೇ ಚೆಂಪುವನ್ನು ಬೆಳೆಸಿದೆ. ಚೆಂಪು, ಚೆನ್ ಧಾತುವಿನಿಂದ ಕೂಡಿದೆ. ಚೆಂಪು: ಚೆನ್ನಾಗಿ, ಹೊಂದುವ, ಸೊಗಸಾದ ಎಂಬ ಅರ್ಥಗಳನ್ನು ಪಡೆದು ಖ್ಯಾತಿ ಪಡೆಯಿತು. ಈ ಕಾವ್ಯ ಶೈಲಿಯನ್ನು ಕುರಿತು ಕನ್ನಡ ಚರಿತ್ರೆಯಲ್ಲಿ ಬಹಳಷ್ಟು ವಿಮರ್ಶೆ, ವಿಶ್ಲೇಷಣೆಗಳು ಸಹ ನಡೆದಿರುವುದು ಉಂಟು. ಅಕ್ಷರ ಛಂದಸ್ಸಿನ ವೃತ್ತ ಪದ್ಯಗಳು, ಅದರಲ್ಲಿಯೂ ಖ್ಯಾತಕರ್ಣಾಟಕಗಳು ಚೆಂಪುವಿನ ಒಡಲು, ಕಂದ ಪದ್ಯಗಳು ಸಣ್ಣ ಸಣ್ಣ ಕುಸುರಿ ರೂಪದ ಶೃಂಗಾರ ಸಾಧನೆಗಳು, ಮುಂದುವರೆದು ಗದ್ಯ, ಹಳಗನ್ನಡ ಕಾವ್ಯದ ಹಂದರಗಳಾಗಿ ಕಾವ್ಯ ಸ್ವರೂಪಕ್ಕೆ ಮೆರುಗನ್ನು ತಂದು ಕೊಟ್ಟಿದೆ. ಸಂಸ್ಕೃತ ಭೂಯಿಷ್ಟ ಕಠಿಣ ಶೈಲಿ ಹಳಗನ್ನಡ ಕಾವ್ಯದ ಗಾಂಭೀರ್ಯವನ್ನು ಎತ್ತಿ ಹಿಡಿದರೆ, ದೇಸೀ ಕನ್ನಡ ಕಾವ್ಯಕ್ಕೆ ಸೊಗುಸು, ಅಲಂಕಾರ, ಲಯ ಬದ್ಧವಾದ ರಮ್ಯತೆಯನ್ನು ತಂದುಕೊಟ್ಟಿದೆ. ಅದರಿಂದಲೇ ಹಳಗನ್ನಡ ಕಾವ್ಯ, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಾರ್ವಕಾಲಿಕ ಮತ್ತು ಆಧುನಿಕ ಜೀವನಕ್ಕೆ ಅನಿವಾರ್ಯತೆಯ ಹೂರಣವು ಆಗಿದೆ. ಒಂದು ರೀತಿಯಲ್ಲಿ, ಸಂಸ್ಕೃತದ ಎದುರು ಕನ್ನಡಿಗರ ಹೊಸ ಕ್ರಾಂತಿ ದೇಸಿ ಬೆರಕೆಯ ಲಯಬದ್ಧ ಚೆಂಪು. ಇದು ಸಾಹಿತ್ಯದ ವಿಷಯಗಳಿಗಷ್ಟೇ ಅಲ್ಲದೆ ಶಾಸ್ತ್ರವಿಷಯಗಳಿಗೂ ಹೇಳಿ ಮಾಡಿಸಿದ ಶೈಲಿಯಾಗಿದ್ದು, ಗಮಕಕಲೆಯ ವಾಹಕ ರೂಪಕವಾಗಿದೆ.

ಹತ್ತನೆಯ ಶತಮಾನದ ಕವಿಗಳು ಕಲಿಗಳೂ ಹೌದು. ತಮಗೆ ಆಶ್ರಯ ಕೊಟ್ಟ ದೊರೆಗಳ ಪಶಂಸೆಗೆ ಬೇಕಾದ ಕಥಾವಸ್ತುವನ್ನು ಆಯ್ಕೆಮಾಡಿಕೊಂಡು ವೀರಮೌಲ್ಯಗಳನ್ನು ಆದರ್ಶದ ಜೀವನಕ್ರಮಗಳಾಗಿ ಚಿತ್ರಿಸಿದರೆ, ಧರ್ಮ ನಿಷ್ಠೆಯಿಂದ ಜೈನ ಧರ್ಮದ ಶ್ರೇಷ್ಠತೆ, ಅದರ ಪ್ರಸಾರ ಮೌಲ್ಯಗಳನ್ನು ಜನಮಾನಸರಲ್ಲಿ ತುಂಬಲು ಬೇಕಾದ ಸಾಧಕ ಜೀವಿಗಳೆನಿಸುವ, ಆದರ್ಶ ವ್ಯಕ್ತಿಗಳ ಕಥಾನಕಗಳನ್ನು ಭೋಗ– ಯೋಗ ಸಮನ್ವಯಗಳ ಮೂಲಕ ಚಿತ್ರಿಸುವುದರಲ್ಲಿ ಸಿದ್ಧಹಸ್ತರಾಗಿದ್ದರು. ಆ ಮೂಲಕ ಪ್ರಾಕೃತ ಮತ್ತು ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದ್ದ, ಪುರಾತನ ಪುರಾಣಗಳ ಧಾರ್ಮಿಕ ಮೂಲದ ಕಥನಗಳಲ್ಲಿನ ಜೈನ ತೀರ್ಥಂಕರರ ಆದರ್ಶ ಬದುಕಿನ ಪ್ರಭಾವಳಿಯನ್ನು ಕವಿಗಳು ಧಾರ್ಮಿಕ ಗ್ರಂಥಗಳ ರಚನೆಯಲ್ಲಿ ತಂದರು. ಸಮಕಾಲೀನ ಮತ್ತು ರಾಜಭಕ್ತಿಯ ಆದರ್ಶತೆಗೆ ರಾಮಾಯಣ ಮತ್ತು ಮಹಾಭಾರತ ಕಥೆಗಳ ಪೌರುಷ ಪುರುಷರನ್ನು ಕಾವ್ಯನಾಯಕರನ್ನಾಗಿ ಸ್ವೀಕರಿಸಿ ಲೌಕಿಕ ಬದುಕಿನ ಮಹತ್ವಕ್ಕೂ ಕಾವ್ಯದಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದರಿಂದ ಹಳಗನ್ನಡ ಕಾವ್ಯಗಳ ಲಕ್ಷಣಗಳಲ್ಲಿ ಲೌಕಿಕ–ಆಗಮಿಕ ಮಾದರಿಗಳು ಸ್ಥಿರವಾದವು. ಜನ್ನನ ನಂತರ ಆಗಮಿಕ ವಸ್ತುಗಳೇ ಕಾವ್ಯದ ವಸ್ತುವಾದರೂ ಕಾವ್ಯಧರ್ಮ– ಧರ್ಮಗಳ ಸಮನ್ವಯತೆಗೆ ಎಲ್ಲಿಯೂ ದಕ್ಕೆ ಬರದಂತೆ ಕಲಾಕೌಶಲ್ಯವನ್ನು ಮೆರೆದಿರುವುದು ಹಳಗನ್ನಡ ಕವಿಗಳ ವೈಶಿಷ್ಟ್ಯ.

ಪಂಪ, ಚಾಲುಕ್ಯ ಅರಿಕೇಸರಿಯ ಆಸ್ಥಾನ ಕವಿ. ಲೌಕಿಕ –ಆಗಮಿಕ ಕಾವ್ಯ ಪರಂಪರೆಗೆ ಮುನ್ನುಡಿ ಬರೆದ ಮೊದಲ ಹರಿಕಾರನೆಂದು ಗುರುತಿಸಬಹುದು. ಪಂಪಪೂರ್ವದಲ್ಲಿಯೂ ಈ ಪರಂಪರೆಗೆ ಉದಾಹರಣೆಗಳು ಇವೆಯೆಂದು ಆಧಾರಗಳನ್ನು ಹೇಳಿದರೂ, ಅಧಿಕೃತ ಗ್ರಂಥಗಳು ಉಪಲಭ್ಯವಿಲ್ಲ. ಅದರಿಂದ ಪಂಪನ ಆದಿಕವಿ ಮಾನ್ಯತೆಗೆ ಇಲ್ಲಿ ದಕ್ಕೆಯಿಲ್ಲ. ಆತನ ಆದಿಪುರಾಣ ಧಾರ್ಮಿಕ ಕೃತಿಯಾಗಿ, ಜಿನಸೇನಾಚಾರ್ಯರ ಸಂಸ್ಕೃತ ಪೂರ್ವಪುರಾಣದ ವಸ್ತುವನ್ನು ಕನ್ನಡೀಕರಿಸಿ ಹೊಸತನಕ್ಕೆ ನಾಂದಿ ಹಾಡದರೆ, ಮಹಾಭಾರತ ಕಾವ್ಯದ ಅರ್ಜುನನನ್ನು ಕಥಾನಾಯಕನನ್ನಾಗಿ ಸ್ವೀಕರಿಸಿ ತನ್ನ ಆಶ್ರಯದಾತ ಅರಿಕೇಸರಿಯ ಸಾಹಸ ವ್ಯಕ್ತಿತ್ವಗಳಿಗೆ ಸಮೀಕರಿಸಿ, ಮಹಾಭಾರತವನ್ನು ಹೊಸ ವ್ಯಾಖ್ಯಾನವಾಗಿ ರೂಪಿಸಿದ್ದಾನೆ. ‘ ಪಂಪನ ಕಾವ್ಯ “ಹಿಂದಿನ ಕಬ್ಬಗಳನೆಲ್ಲಂ ಇಕ್ಕಿ ಮೆಟ್ಟಿದುವು” ಮುಂದಿನ ಕಾವ್ಯಗಳಿಗೆ “ ಬಟ್ಟೆದೋರಿದುವು” ಹದಿನಾಲ್ಕನೆಯ ಶತಮಾನದ ಕವಿ ನಾಗರಾಜ “ ಪಸರಿಪ ಕನ್ನಡಕ್ಕೊಎಡಯನೊರ್ವನೆ ಸತ್ಕವಿ ಪಂಪನಾವಗಂ” ಎಂದು

ಸಾರಿದ ಮಾತು ಎಂದಿಗೂ ಪ್ರಸ್ತುತ. ಸಾಜದ ಪುಲಿಗೆಱೆಯ ತಿರುಳ ಕನ್ನಡ ಪಂಪನ ಶೈಲಿ. " ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮಂ" ಎಂದು ತನ್ನ ಕಾವ್ಯಗಳ ಮಾದರಿಯನ್ನು ಪರಿಚಯಿಸುತ್ತಾನೆ. "ನೆಗಟ್ದಾದಿಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ" ಎಂದು ಹತ್ತನೆಯ ಶತಮಾನದ ಕವಿಗಳ ಆಶಯಗಳನ್ನು ಧ್ವನಿಸುತ್ತಾನೆ. ರಾಜರು, ಧರ್ಮ ಗುರುಗಳಷ್ಟೇ ಕವಿಗಳಿಗೆ ಮುಖ್ಯವಾಗುವುದಿಲ್ಲ. ಅವರಿಗೆ ಅನ್ನ ನೀಡಿದ ಭೂಮಿಯೂ ಅವರ ಆದರ್ಶಕ್ಕೆ ಪ್ರೇರಣೆ ಆಗಿದೆ ಎನ್ನ ಬಹುದು. ತನಗೆ ತನ್ನ ಕಾವ್ಯಕ್ಕೆ ಆಶ್ರಯವಾದ ಕನ್ನಡ ಭೂಮಿಯ ಬಗ್ಗೆ ಪಂಪನ ಗೌರವವ ಮಾತುಗಳು " ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರಮಾದ ಮಾನಸರೆ ಮಾನಸರಂತವರಾಗಿ ವುಟ್ಟಲು ಏನಾಗಿಯುಂ ಏನೊ ತೀರ್ದಪುದೇ,ತೀರದೊಡಂ ಮಱಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್" ಎಂದು ಹೇಳುವ ಮಾತುಗಳಲ್ಲಿ ಕವಿಗಳಿಗೆ ದೇಶಾಭಮಾನ, ಪ್ರಾಂತಾಭಮಾನಗಳು ಸಹ ಕಾವ್ಯಕ್ಕೆ ಸ್ಪೂರ್ತಿ ಆಗಿರುವುದು ಪಂಪ ಕಾವ್ಯದ ಸೊಬಗು.

ಇದೇ ಪರಂಪರೆಯು ನಂತರದ ಪೊನ್ನ ಕವಿಯಲ್ಲಿ ಶಾಂತಿನಾಥ ಪುರಾಣ, ಭುವನೈಕರಾಮಾಭ್ಯದಯ ಕಾವ್ಯಗಳು, ರನ್ನಕವಿಯ ಅಜಿತನಾಥ ಪುರಾಣ ತಿಲಕಂ ಮತ್ತು ಗದಾಯುದ್ಧಯೆಂದು ಕೀರ್ತಿಗೊಂಡ ಸಾಹಸಭೀಮವಿಜಯ ಕಾವ್ಯಗಳಲ್ಲಿ ಮುಂದುವರೆಯಿತು. ಆದರೂ ಇವು ನಿತ್ಯ ಹೊಸತನದೊಂದಿಗೆ ಆ ಕವಿಗಳ ಪ್ರತಿಭೆ, ವೈಯಕ್ತಿಕ ಅಭಿರುಚಿಗಳ ಕಲೆಯಲ್ಲಿ ಹೊಸ ಮಾದರಿಗಳಾಗಿಯೇ ಗುರುತಿಸಿಕೊಂಡು ಅವರಿಗೆ ಕೀರ್ತಿಯನ್ನು ತಂದುಕೊಟ್ಟಿವೆ. ಒಬ್ಬ ಕವಿಗಿಂತ ಮತ್ತೊಬ್ಬ ಶ್ರೇಷ್ಠ ಎಂಬುದನ್ನು ಅವರು ತಮ್ಮ ಕಾವ್ಯಗಳಲ್ಲಿ ಗುರುತಿಸಿಕೊಂಡಿರುವುದು ಇದೆ.

ರನ್ನ ಕವಿಯಂತೂ "ಆರಾತೀಯ ಕವೀಶ್ವರ ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ" ಎಂದು ಗರ್ವದಿಂದ ಹೇಳಿಕೊಂಡಿದ್ದಾನೆ. ಸರಸ್ವತಿಯ ಭಂಡಾರದ ಮುದ್ರೆಗೇ ಕೈ ಹಾಕಿ ಒಡೆಯುವ ಕಲ್ಪನೆ ತನ್ನನ್ನು ವೈಭವೀಕರಿಸಿಕೊಳ್ಳುವ ಕವಿಯ ಆತ್ಮ ಬಲದ ಧ್ಯೋತಕವಾಗಿ ಮೂಡಿ ಬಂದಿರುವುದು ಆತನ ಅಹಂ ಅನ್ನು ಬಿತ್ತರಿಸದೆ ಶಕ್ತಿ ಕವಿ ಎನಿಸುವ ರೂಪಕಕ್ಕೆ ಕಾರಣವಾಗಿದೆನ್ನಬಹುದು. ಮಹಾಭಾರತದ ಕೊನೆಯ ಅರ್ಧದಿನದ ಯುದ್ಧಕಥೆಯನ್ನು ಆಯ್ಕೆ ಮಾಡಿಕೊಂಡು ಸಿಂಹಾವಲೋಕನ ಕ್ರಮದಿಂದ ಇಡೀ ಮಹಾಭಾರತವನ್ನೇ ಕಣ್ಣೆದುರು ತಂದು ನಿಲ್ಲಿಸಿ, ದುಷ್ಟ ದುರ್ಯೋಧನನನ್ನು ಮಹಾನುಭಾವನಂತೆ ಚಿತ್ರಿಸಿ ಮಾನವ ಬದುಕಿನ ಸಹಜ, ಸಂದರ್ಭ, ಏಳು–ಬೀಳುಗಳ ರೂಪಕಕ್ಕೆ ಜೀವಂತಿಕೆಯನ್ನು ಕೊಟ್ಟಿದ್ದಾನೆ.

" ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲಮೀ ಗದಾಯುದ್ಧದೊಳಂ
ತೊಳಕೊಂಡತ್ತೆನೆ ಸಿಂಹಾ
ವಳೋಕನಕ್ರಮದಿನಱಿಪಿದಂ ಕವಿರನ್ನಂ"

ಕಿರಿದರಲ್ಲಿ ಹಿರಿದರ್ಥ ಹಾಗೂ ಕೊನೆಯ ಭಾಗದಿಂದ ಮೂಲದ ವೈಭವೀಕರಣ ರನ್ನಕವಿಯ ವೈಶಿಷ್ಟ್ಯ. ಪಂಪ ಕವಿಯ ಹತ್ತು ಪರ್ವಗಳು ನೀಡುವ ಕಾವ್ಯ ಸೌಂದರ್ಯವನ್ನು ರನ್ನ ಒಂದೇ ಪರ್ವದ ಕೊನೆಯ ಭಾಗದಿಂದ ದರ್ಪಣಗೊಳಿಸಿರುವುದು ಇಡೀ ಹಳಗನ್ನಡ ಕಾವ್ಯಕ್ಕೇ ಕಿರೀಟಪ್ರಾಯವಾಗಿದೆ. ತನಗೆ ಆಶ್ರಯ ನೀಡಿದ ಸತ್ಯಾಶ್ರಯ ಇರಿವಬೆಡಂಗನ ಸಾಹಸ, ವಂಶವೈಭವ, ಜೈನಧರ್ಮದ ಹಿನ್ನೆಲೆ, ಕವಿ ಆದರ್ಶ ನುಡಿಗಳ ಹೊರತಾಗಿಯೂ ಕಾವ್ಯ ನಾಟಕವಾಗಿರುವುದು ರನ್ನ ಕವಿಯ ಪ್ರತಿಭೆಗೆ ಸಾಕ್ಷಿ.

"ಜನಕಂಗೆ ಜಲಾಜಲಿಯಂ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 12, 2021

ತನೂಭವಂ ಕುಡುವುದುಚಿತಮದುಗೆಟ್ಟೀಗಳ್

ನಿನಗಾಂ ಕೊಡುವಂತಾದುದೆ

ತನೂಜ ನೀಂ ಕ್ರಯವಿಪರ್ಯಯಂ ಮಾಡುವಿದೇ"

ಮಗನನ್ನು ಕಳೆದುಕೊಂಡ ತಂದೆ ತನ್ನ ಎಲ್ಲಾ ಲೌಕಿಕ ವ್ಯವಹಾರಿಕವನ್ನು ಕಳಚಿಕೊಂಡು ಬರೀ ತಂದೆಯಾಗಿ ಕಣ್ಣೀರಿಡುವ ದೃಶ್ಯ ಹೃದಯವನ್ನು ತಣಿಸದೆ ಬಿಡುವುದೇ ಇಲ್ಲ. ದುರ್ಯೋಧನ ದುಷ್ಟನಾಗಿರಬಹುದು ಅವನೂ ಮನುಷ್ಯನೇ, ರಾಕ್ಷಸನಲ್ಲ. ಮಗ ಲಕ್ಷ್ಮಣ ಕುಮಾರನ ಕಳೇಬರ ಅವನ ಛಲತನವನ್ನೂ ಕದಲಿಸಿಬಿಡುತ್ತದೆ. ಆ ಕ್ಷಣ...

"ಗಳಿತಶರಮಾಯ್ತು ಹಸ್ತಂ

ಗಳಿತ ರಣೋತ್ಸಾಹಮಾಯ್ತು ಹೃದಯಂ ನಯನಂ

ಗಳಿತ ಅಶ್ರುವಾಯ್ತು ಕೌರವ

ಕುಲತಿಲಕಂಗೆ ಆ ಕುಮಾರಣಮ ಕಾಣಲೊಡಂ" ಗಳಿತ ಗಳಿತ ಶಬ್ದಗಳನ್ನು ಪದೇಪದೇ ತರುವುದರ ಮೂಲಕ ಪ್ರಯತ್ನವಿಲ್ಲದೆ, ತನ್ನಿಂದ ತಾನೇ ಯುದ್ಧೋತ್ಸಾಹ ಕುಂದಿ, ಗದಾದಂಡ ನೆಲಕ್ಕೆ ಬೀಳುವುದು, ಮನಕರಗಿ, ಹೃದಯದ ನೋವಿನಿಂದ ಕಣ್ಣೀರು ತಾನಾಗಿ ಸುರಿಯುವುದು, ಮಗನ ಮೇಲಿನ ವ್ಯಾಮೋಹ, ಶೋಕಗಳನ್ನು ಒಟ್ಟಿಗೆ ತರುವ ರನ್ನ ಕವಿಯ ಪ್ರತಿಭೆ ತಾನಾಗಿಯೇ ಅರಳಿದೆ. ಎಲ್ಲವನ್ನು ಕಳೆದುಕೊಂಡ ದುರ್ಯೋಧನನಾಗಿ ಉಳಿಯದೆ ರನ್ನನಲ್ಲಿ ಸುಯೋಧನನಾಗುತ್ತಾನೆ. ಶತೃವಿನ ಮಗುವನ್ನೂ ಪ್ರೀತಿಸುವ ಹಂತಕ್ಕೆ ಆತನನನ್ನು ತರುವುದು ಮಾನವ ಸಂಸ್ಕಾರದ ಉತ್ತೇಜನವಲ್ಲದೆ ಬೇರೆ ಏನು ಹೇಳಲು ಸಾಧ್ಯ. ತನ್ನ ವಂಶವನ್ನು ನಾಶ ಮಾಡಿದ ಅರ್ಜುನನ ಪುತ್ರ ಅಭಿಮನ್ಯುವಿನ ಸಾವು ಸುಯೋಧನನನ್ನು ಕದಲಿಸಿ ಬಿಡುತ್ತದೆ. ತಾನು ವ್ಯೂಹರಚನೆ ಮಾಡಿ ವಂಚಿಸಿ ಕೊಂದ ಪ್ರಸಂಗ ಸುಯೋಧನನಿಗೆ ಪಶ್ಚಾತ್ತಾಪದ ಭಾವುಕತೆಗೆ ಒಳಪಡಿದೆ.

" ಗುರು ಪಣ್ಣಿದ ಚಕ್ರವ್ಯೂ

ಹ ರಚನೆ ಪೆಱರ್ಗೆ ಅರಿದು ಪುಗಲ್, ಇದಂ ಪೊಕ್ಕು ರಣಾ

ಜಿರದೊಳ್ ಅರಿನೃಪರನ್ ಇಕ್ಕಿದ (ಕೊಂದ)

ನರಸುತ ನಿನ್ನೊರೆಗೆ ದೊರೆಗೆ ಗಂಡರುಮ್ ಒಳರೇ"

,,,,,, ನಿನ್ನಂ ಪೆತ್ತಳ್

ಮೊಲೆವೆತ್ತಳೆ ವೀರಜನನಿವೆಸರಂ ಪೆತ್ತಳ್" ಅಭಿಮನ್ಯುವನ್ನು ಸಹ ಹೊಗಳಿದ ದುರ್ಯೋಧನನ ಬದಲಾದ ಸುಯೋಧನನ ಮುಖವನ್ನು ರನ್ನ ಮಹಾನುಭಾವತನಕ್ಕೆ ಏರಿಸುತ್ತಾನೆ.

ರನ್ನನ ಕೃತಿಗಳಲ್ಲೆಲ್ಲ ಶ್ರೇಷ್ಠವಾದುದು, ಆತನ ಪ್ರತಿಭೆ ಶಕ್ತಿಗಳ ಪ್ರತಿನಿಧಿಯಾದುದು ಗದಾಯುದ್ಧ. ಮೂಲ ಮಹಾಭಾರತದ ಗದಾಪರ್ವ ಮತ್ತು ಸೌಪ್ತಿಕ ಪರ್ವಗಳ ಕಥೆಯೇ ರನ್ನನ ಕಾವ್ಯದ ವಸ್ತು. ಆದರೆ ಕಾವ್ಯಕ್ಕೆ ವಿಸ್ತೃತರೂಪವಾಗಿ ಸಂದರ್ಭಗಳನ್ನು ಒದಗಿಸಿಕೊಂಡು ಸಿಂಹಾವಲೋಕನ ಕ್ರಮದಿಂದ ಪೂರ್ವಕಥೆಯನ್ನು ಸೂಚಿಸುವ ವಿಧಾನವನ್ನು ಅನುಸರಿಸಿರುವುದರಿಂದ ಗದಾಯುದ್ಧ ಕಾವ್ಯಕ್ಕೆ ಪರಿಪೂರ್ಣತೆ ಪ್ರಾಪ್ತವಾಗಿದೆ. ಪಂಪನಲ್ಲಿ ಹತ್ತು ಆಶ್ವಾಸಗಳಲ್ಲಿ ಹರಡಿಕೊಂಡಿರುವ ಮಹಾಭಾರತ ಕಾವ್ಯ ರನ್ನನಲ್ಲಿ ಭೀಮ–ದುರ್ಯೋಧನರ ಗದಾಯುದ್ಧವೇ ಪ್ರಮುಖವಾಗಿ ನಿಲ್ಲುತ್ತದೆ. ಕವಿ ಸಾಹಸಭೀಮ ವಿಜಯಂ ಎಂದು ಕರೆದಿದ್ದರೂ ಗದಾಯುದ್ಧವೆಂದೇ ಕಾವ್ಯ ಪ್ರಸಿದ್ಧಿಯನ್ನು ಪಡೆದಿದೆ. ಮಹಾಭಾರತದ ಭೀಮನೊಡನೆ ತನ್ನ ಆಶ್ರಯದಾತ ಸತ್ಯಾಶ್ರಯ ಇರಿವಬೆಡಂಗನನ್ನು ಅಭೇದ ಕಲ್ಪಿಸಿದ್ದು ರನ್ನನ ಕಾವ್ಯದ ವಿಶೇಷ. ರನ್ನನ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
*Research Paper* © 2012 IJFANS. All Rights Reserved, UGC CARE Listed ( Group -I) Journal Volume 10, Iss 12, 2021

ಗದಾಯುದ್ಧಕ್ಕೆ ಪಂಪನ ವಿಕ್ರಮಾರ್ಜುನವಿಜಯದ ಹದಿಮೂರನೆಯ ಆಶ್ವಾಸದ ಪ್ರೇರಣೆ,ಪಂಪನ ಪ್ರಭಾವ ಇದ್ದರೂ, ಭಟ್ಟ ನಾರಾಯಣನ ವೇಣಿಸಂಹಾರದ ನಾಟಕೀಯತೆಯಿದ್ದರೂ ಕವಿ ರನ್ನ ಅವುಗಳನ್ನು ಸ್ಮರಿಸಿಲ್ಲ. ವ್ಯಾಸ, ವಾಲ್ಮೀಕಿ, ಕಾಳಿದಾಸ, ಬಾಣರನ್ನು ವಂದಿಸುತ್ತಾನೆ. ಇನ್ನು ಗದಾಯುದ್ಧದ ಕಥಾಭಾಗವೂ ಮೂಲದಲ್ಲಿ ಅತ್ಯಂತ ಕಿರಿದಾದುದು. ಜೊತೆಗೆ ಗದಾಯುದ್ಧದಲ್ಲಿ ಕಾಣುವ ಎಷ್ಟೋ ಅಂಶಗಳೂ ಮೂಲಕಥೆಯಲ್ಲಿ ಇಲ್ಲದೇ ಕವಿಯ ಸ್ವಂತಿಕೆಯನ್ನು ಅವಲಂಬಿಸಿದೆ. ಕಥೆಯು ಸಂಪೂರ್ಣ ಮಾನವ ಪ್ರಭಾವಿತವಾಗಿದೆ.

ನಾಗಚಂದ್ರ ಅಭಿನವ ಪಂಪನೆಂದೇ ತನ್ನನ್ನು ಕರೆದುಕೊಂಡು ರಾಮಚಂದ್ರಚರಿತಪುರಾಣಂ ಮತ್ತು ಮಲ್ಲಿನಾಥ ಪುರಾಣಗಳನ್ನು ಬರೆದು ಜೈನ ಪರಂಪರೆಯಲ್ಲಿ ವೈಜ್ಞಾನಿಕ ಸತ್ಯಶೋಧನೆಯನ್ನು ಕಾವ್ಯಗಳ ಮೂಲಕ ಪರಾಮರ್ಶಿಸಿದ್ದಾನೆ. ಸೀತಾಪಹರಣದ ಸ್ವಾರಸ್ಯ ಭಾಗ " ಬಲೆ ದೃಷ್ಟಿಗೆ ವಜ್ರದ ಸಂಕಲೆ ಹೃದಯಕ್ಕೆ ಎನಿಪ ರೂಪವತಿ ಜಾನಕಿ ! ? ಕಣ್ಬೊಲದೊಳಿರೆ(ಕಣ್ಣೆಂಬ ಹೊಲದಲ್ಲಿರಲು)ಪದ್ಮ ಪತ್ರದ ಜಲಬಿಂದುವಿಂತೆ ಚಲಿತಮಾದುದು ಚಿತ್ತಂ" ಯಾರಿಗೆ ತಾನೆ ಸೌಂದರ್ಯದ ಮೇಲೆ ಮೋಹವಿರುವುದಿಲ್ಲ. ಹೆಣ್ಣು ಆಕರ್ಷಕ ಮತ್ತು ಕಣ್ ಚಂಚಲೆಯ ಗುಣ ಪುರುಷನನ್ನು ಬಂದಿಸದೆ ಬಿಡುವುದೇ?. ರಾವಣ ಸೀತಾ ಮೋಹಕ್ಕೆ ಒಳಗಾಗಿದ್ದು ಸಹ ಮಾನವ ಸಹಜ ದೌರ್ಬಲ್ಯ. "ಅಬ್ಧಿಯುಮೊರ್ಮೆ ಮರ್ಯಾದೆಯಂ ದಾಂಟದೇ ಎಂದು ಹೇಳುವ ಮೂಲಕ ಸೀತಾಪಹರಣದ ರಾವಣ ಪಾತ್ರದ ಮಾನವಸಹಜ ದೌರ್ಬಲ್ಯವನ್ನು ಸಮರ್ಥಿಸಲು ಪ್ರಯತ್ನಿಸಿ, ಅವನಲ್ಲಿನ ಶ್ರೇಷ್ಟಗುಣಗಳನ್ನು ಜಗತ್ತಿಗೆ ತೋರಿಸಿದ್ದಾನೆ. ಮಹಾನುಭಾವತನಕ್ಕೆ ಇರಬೇಕಾದ ಅರ್ಹತೆಗಳನ್ನು ರಾವಣನಲ್ಲಿ ಗುರುತಿಸಿದ್ದಾನೆ.

ಆದರೂ ಪರನಾರಿ, ಸಹಧರ್ಮಿಣಿ ಪರಪುರುಷನ ಸ್ವತ್ತಲ್ಲವೆಂಬ ಅರಿವೂ ನಾಗಚಂದ್ರನಿಗಿದೆ.

"ಅವಿವೇಕಿ ದಶಮುಖಂ ದೃ
ಷ್ಟಿ ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕರ್ಯ ನೀ
ಡುವ ಗಾಂಪನಂತೆ ರಘುವೀ
ರ ವಧೂ ಜನಕಜೆಗೆ ಮನದೊಳಳಿಪಂ ತಂದಂ."

"ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಬುವಂ ಕಡಂಗಿ ಕಾಳೋಗರನಂ
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ." ಎಂಬ ಮಾತುಗಳಲ್ಲಿ ಸಂಸ್ಕಾರ, ಸಂಸ್ಕೃತಿ, ನ್ಯಾಯ, ಪ್ರೀತಿಗಳ ಸಂಘರ್ಷವನ್ನು ಮುಖಾಮುಖಿಯಾಗಿಸಿ ಸಹೃದಯನಲ್ಲಿ ಮೌಲ್ಯಗಳನ್ನು ಜಾಗೃತಿಗೊಳಿಸಿರುವುದು ಕವಿ ಸಾಮರ್ಥ್ಯವೇ ಸರಿ.

ಕ್ರಿ.ಶ.ಸು.990ರಲ್ಲಿದ್ದನೆಂದು ಎಷ್ಟೋ ದ್ವಂದ್ವಗಳ ನಡುವೆ ನಂಬಲಾಗುವ ಮೊದಲನೇ ನಾಗವರ್ಮನು ಹಳಗನ್ನಡದಲ್ಲಿ ಛಂದೋಂಬುದಿ ಮತ್ತು ಕರ್ಣಾಟಕ ಕಾದಂಬರಿ ಎಂಬಕೃತಿಗಳನ್ನು ಬರೆದಿದ್ದಾನೆ. ಚಂದ್ರನೆಂಬ ರಾಜನನ್ನು ತನ್ನ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡು ಬಾಣಭಟ್ಟ ಮತ್ತು ಭೂಷಣಭಟ್ಟರ ಸಂಸ್ಕೃತ ಕಾವ್ಯಭಾಗಗಳನ್ನು ಕನ್ನಡೀಕರಿಸಿದ ಕೀರ್ತಿ ನಾಗವರ್ಮನಿಗೆ ಸಲ್ಲುತ್ತದೆ. ಬ್ರಾಹ್ಮಣನಾದ ನಾಗವರ್ಮನಿಗೆ ಧರ್ಮ ಪ್ರಚಾರದ ತೊಡುಕಿರಲಿಲ್ಲ. ಅದರಿಂದ ಸಂಪೂರ್ಣ ಕಲ್ಪಿತ ರೂಪದ ಕಥೆ ಪ್ರೀತಿ– ಪ್ರೇಮಗಳ ಸಂಗಮ, ವೈರಾಗ್ಯ–ಕಾಮಗಳ ಮುಖಾಮುಖಿಯಾಗಿ, ಕಾಮ– ಪ್ರೇಮವಾಗಿಕೊಳ್ಳಲು ಕಾವ್ಯದ ನಾಯಕ, ನಾಯಕಿ ಸಂಪಾದನೆ ಮಾಡಿಕೊಳ್ಳಬೇಕಾದ ಜೀವನ ಸಂಯಮಗಳನ್ನು ಯಶಸ್ವಯಾಗಿ ಚಿತ್ರಿಸಿದ್ದಾನೆ. ಪುಂಡರೀಕ– ಮಹಾಶ್ವೇತೆ, ಚಂದ್ರಾಪೀಡ–ಕಾದಂಬರಿಗಳ ಕಥನವಾಗಿ ರೂಪಿಸಲು ಪ್ರಯತ್ನಿಸಿ,

ಪ್ರಕೃತಿಯ ವರ್ಣನೆ, ಜೀವನದ ವರ್ಣನೆ, ಹೆಣ್ಣಿನ ವರ್ಣನೆ, ಪುರುಷ ಮತ್ತು ಸ್ತ್ರೀತನಗಳ ನಿಜವಾದ ಸ್ವರೂಪ ದರ್ಶನಗಳನ್ನು ಮಾಡಿಸಲು ನಾಗವರ್ಮ ಅನುಸರಿಸಿದ ಪುನರ್ಜನ್ಮದ ಕಥೆಗಳು ಕಲ್ಪನಾಲೋಕಕ್ಕೆ ಕರೆದೊಯ್ಯುತ್ತದೆ. ಕಾವ್ಯ ಅನುವಾದವಾದರೂ ಕವಿ ಪ್ರತಿಭೆ ಕನ್ನಡತನವನ್ನು ಇಮ್ಮಡಿಗೊಳಿಸಿದೆ. ಕಾದಂಬರಿ ಆಧುನಿಕ ಕಾದಂಬರಿಯಂತೆ ವಿಸ್ತೃತವೂ, ವರ್ಣನಾಮಯವೂ ಆಗಿದೆ. ನಾಗವರ್ಮನ ಕಾವ್ಯ ವಿಶೇಷತೆಯೇ ಇಲ್ಲಿ ರಮ್ಯತನದ ನಿರ್ಮಾಣವೆಂದರೆ ತಪ್ಪಾಗಲಾರದು.

ಜನ್ನ ಕವಿಯಂತೂ ಹಿಂಸೆ– ಅಹಿಂಸೆಗಳ ಸಂಘರ್ಷವನ್ನು ಸಹಜತೆಯ ಹಿನ್ನಲೆಯಲ್ಲಿ ದಾಖಲಿಸಿ ಕೌಟುಂಬಿಕ ದೋಷ, ಪ್ರೀತಿ ಪ್ರೇಮಗಳನ್ನು ವಾಸ್ತವಿಕ ನೆಲೆಯಲ್ಲಿ ನೋಡಲು ಪ್ರಯತ್ನಿಸಿರುವುದು. ಕಾವ್ಯ ಸತ್ವತೆಗೆ ಜೀವಾಳವೇ ಆಗಿದೆ. ಅಮೃತಮತಿ–ಅಷ್ಟವಂಕನ ಪ್ರೀತಿ, ಯಶೋಧರ ಯಶೋಮತಿಯರ ಅಸಹಾಯಕ ಧಾರ್ಮಿಕ ಸತ್ವತನ, ಅಭಯಮತಿ–ಅಭಯರುಚಿಗಳ ವೈರಾಗ್ಯ, ಧೈರ್ಯಗಳು, ದೊರೆ ಚಂಡಶಾಸನನ ಕ್ರೂರತ್ವಗಳು, ಕಾವ್ಯತ್ವವನ್ನು ಪಡೆಯುತ್ತಲೇ ಧಾರ್ಮಿಕತೆಯನ್ನು ಉತ್ತೇಜಿಸುತ್ತವೆ.

ಅದರಿಂದ ಹಳಗನ್ನಡ ಕಾವ್ಯಗಳು ಮತ್ತು ಹತ್ತನೆಯ ಶತಮಾನದ ಕವಿಗಳು ಅಲ್ಲಿನ ವಸ್ತು ಮತ್ತು ವರ್ಣನೆಗಳನ್ನು ಸಹಜ ಸೌಂದರ್ಯಗಳಲ್ಲಿ ನಿರೂಪಿಸಿ, ಒಂದು ಪರಂಪರೆಯನ್ನೇ ನಿರ್ಮಿಸಿದ್ದಾರೆ. ಅದರ ಸೂಚಕವಾಗಿ ವಸ್ತುಕ–ವರ್ಣಕವೆಂಬ ರೂಪಕಗಳನ್ನು ಹಳಗನ್ನಡ ಕಾವ್ಯಗಳಲ್ಲಿ ಗುರುತಿಸಿದ್ದಾರೆ. ಪ್ರಾಚೀನದ ಸಂದರ್ಭದಲ್ಲಿ ಕವಿ ಪಂಡಿತನೂ ಹೌದು, ಕವಿಯ ಕಾವ್ಯ ನಿರ್ಮಿತಿಯಲ್ಲಿ ಆತ ಅಷ್ಟಾದಶ ವರ್ಣನೆಗಳನ್ನು ತರುವುದು ರೂಢಿಯೇ ಸರಿ. ಅಗತ್ಯಕ್ಕೆ ತಕ್ಕಂತೆ, ವಸ್ತು ಮತ್ತು ವರ್ಣನೆಗಳನ್ನು ನಿರ್ವಹಿಸಿ ಕಾವ್ಯ ಸೌಂದರ್ಯವನ್ನು ರೂಪಿಸಿ ಸಹೃದಯರ ಮನಗೆಲ್ಲುವಲ್ಲಿ ಬಹುತೇಕ ಕವಿಗಳು ಮತ್ತು ಅವರ ಹಳಗನ್ನಡ ಕಾವ್ಯಗಳು ಗೆಲುವನ್ನು ಪರಿಪೂರ್ಣವಾಗಿ ಅಲ್ಲದಿದ್ದರೂ ಸಾಧಿಸಿವೆ.

ಹಳಗನ್ನಡ ಕಾವ್ಯಗಳ ಸ್ವರೂಪವನ್ನು ಪರಿಚಯಿಸುವಾಗ ಧರ್ಮ, ಕಾವ್ಯಧರ್ಮಗಳು ಪ್ರಾಮುಖ್ಯ ಪಡೆದಿರುವುದು ವಿಶೇಷ. ರಾಮಾಯಣ ಮಹಾಭಾರತಗಳನ್ನು ವಸ್ತುನಿಷ್ಠವಾಗಿ, ಮಾನವ ಸ್ವಭಾವನಿಷ್ಠವಾಗಿ, ಕಲ್ಪಿಸಿರುವುದಲ್ಲದೆ ಅಂದಿನ ಜೀವನ ಮೌಲ್ಯಗಳಲ್ಲಿ ವೀರ, ದಾನ, ಶೂರ, ರಕ್ಷಣೆ, ಸತ್ಯನಿಷ್ಠೆಯ ಪರವಾಗಿರುವುದಲ್ಲದೆ, ಧರ್ಮ– ಅಧರ್ಮ ಸಂಘರ್ಷ ಸಹ ವಿಮರ್ಶೆ ಒಳಪಡಿಸಿ, ಮಾನವ ಮೌಲ್ಯಗಳನ್ನು ಸಾರ್ವತ್ರೀಕರಿಸಿದ್ದಾರೆ. ಕವಿ– ಕಲಿಯೂ ಹೌದು ಎಂಬುದನ್ನು ಕಾವ್ಯ ರಚನೆಯ ಮೂಲಕ ತೋರಿಸದ್ದಾರೆ. ಸಂಕ್ಷಿಪ್ತವಾಗಿ ಆ ಕಾಲದ ಕಾವ್ಯ ಲಕ್ಷಣಗಳಲ್ಲಿ ಪ್ರಮುಖವಾದ ಮೂಲಾಂಶಗಳನ್ನು ಪಟ್ಟಿ ಮಾಡುವುದಾದರೆ, ಕಾವ್ಯ ಜೈನ ಮತ ಪ್ರಾಬಲ್ಯವನ್ನು ಎತ್ತಿ ಹಿಡಿಯಲು ಪ್ರಯತ್ನಿಸಿದೆ. ಸಂಸ್ಕೃತ ಮೂಲದಿಂದ ಅಸ್ತಿತ್ವವನ್ನು ಪಡೆದರೂ ಸ್ವಂತಿಕೆಯಿಂದ ವೈಶಿಷ್ಟ್ಯತೆಯನ್ನು ಕಾಯ್ದುಕೊಂಡಿದೆ. ಧರ್ಮ ಮತ್ತು ಕಾವ್ಯ ಧರ್ಮಗಳನ್ನು ಸಮನ್ವಯಗೊಳಿಸಲು ಪಯತ್ನಿಸಿ, ಸಾಧಿಸಿದೆ. ಕಾವ್ಯವೆಂಬುದು ನವರಸಗಳ ಸಮರಸದಿಂದ ಸಮನ್ವಯತೆಯನ್ನು ಗಳಿಸಬೇಕೆಂದು ದೃಡಪಡಿಸಿದೆ. ಸಂಸ್ಕೃತದೊಂದಿಗೆ ಕನ್ನಡವನ್ನು ಬೆರೆಸಿ ಮಾರ್ಗ–ದೇಸಿಗಳ ಹೊಸ ಹಳೆಯ ಕನ್ನಡಕ್ಕೆ ಮಾದರಿಯಾಗಿದೆ. ಚೆಂಪೂ ಶೈಲಿಯನ್ನು ಪ್ರಖ್ಯಾತಿಗೊಳಿಸಿದೆ. ರಾಜಾಶ್ರಯ ಕವಿಯನ್ನು ವಿನಮ್ರನನ್ನಾಗಿ ಮಾಡಿದರೂ ಕಾವ್ಯ ವೈಶಿಷ್ಟ್ಯ ಎಲ್ಲಿಯೂ ಕುಂದದಂತೆ ಜಾಗೃತಿ ವಹಿಸಿರುವುದು ಕವಿಗಳ ಸ್ವಾಭಿಮಾನವನ್ನು ವೃದ್ಧಿಸಿದೆ. ಗದ್ಯ, ಪದ್ಯಗಳ ಮಿಶ್ರಣದೊಂದಿಗೆ ಅವುಗಳನ್ನು ಸಹೃದಯ ಬಳಗಕ್ಕೆ ತೋರಿಸಿ ಭಾಷಿಕನ್ಯಾಯವನ್ನೂ ಒದಗಿಸಿದೆ.

ಕಾವ್ಯ ಬರೀ ಧರ್ಮ–ಪುರಾಣಗಳಿಗೆ ಮೀಸಲಾಗದೆ, ಶಾಸ್ತ್ರವಿಷಯಗಳೂ ಕಾವ್ಯದ ಭಾಷೆಯಲ್ಲಿ ಮೂಡಿಬಂದಿರುವುದು ಹಳಗನ್ನಡ ಕಾವ್ಯದ ವೈಶಿಷ್ಟ್ಯ. ಒಂದನೇ ನಾಗವರ್ಮನ ಛಂದೋಂಬುಧಿ, ಚಾವುಂಡರಾಯನ ಲೋಕೋಪಕಾರ ಜೋತಿಷ, ಚಂದ್ರರಾಜನ ಮದನತಿಲಕ, ಶ್ರೀಧರಾಚಾರ್ಯನ ಜಾತಕ ತಿಲಕ, ಕೇಶಿರಾಜನ ಶಬ್ದಮಣಿದರ್ಪಣ ಮೊದಲಾಗಿ ಹಳಗನ್ನಡ ಕಾವ್ಯ ವೈವಿದ್ಯಮಯ ರೂಪಗಳಗೆ ಸಾಕ್ಷಿಯಾಗಿದೆ. ಈ ಹಳಗನ್ನಡ ಕಾವ್ಯದ

ಅಧ್ಯಯನ, ಕನ್ನಡ ಸಾಹಿತ್ಯದ ಸೊಬಗು, ಇದರ ರಸಾಸ್ವಾದಗಳು ಓದುಗನ್ನು ಆಕರ್ಷಿಸುವಲ್ಲಿ ಮೋಹಕತೆಗೂ ಒಳಪಡಿಸಿ ಅದು ನಿರಂತರ ಸಾರ್ವತ್ರಿಕವಾಗುತ್ತಾ ಬರುತ್ತಿವುದು ಹಳಗನ್ನಡ ಕಾವ್ಯಗಳ ಸಾಹಿತ್ಯಿಕ ಮೌಲ್ಯದ ಆಕರ್ಷಕವೇ ಸರಿ.

ಹಳಗನ್ನಡ ಕಾವ್ಯಗಳು ಇಡೀ ಕನ್ನಡ ಸಾಹಿತ್ಯದಲ್ಲಿ ನಿರಂತರ ಅಧ್ಯಯನಗಳಿಗೆ ಒಳಗಾಗಿ ಅದೆಷ್ಟೋ ಸಂಶೋಧನೆಯ ಕೃತಿಗಳಿಗೂ ಕಾರಣವಾಗಿದೆ. ಅಂತಹ ಹಳಗನ್ನಡ ಕಾವ್ಯಗಳ ಸ್ವರೂಪವನ್ನು ಪರಿಪೂರ್ಣವಾಗಿ ರೂಪಿಸುವುದು ಕಷ್ಟವೂ ಆಗುತ್ತದೆ. ಗುಡ್ಡವನ್ನು ಕಡಿಯುವ ಮೂರ್ಖತನವೂ ಆಗುತ್ತದೆ ಎಂಬುದು ನನ್ನ ಭಾವನೆ. ಆದರೂ ಆಯ್ದ ಪ್ರಮುಖ ಕವಿ ಮತ್ತು ಕಾವ್ಯಗಳ ಅಧ್ಯಯನದ ಆಧಾರದಿಂದ ಸಂಕ್ಷಿಪ್ತವಾಗಿ, ಹಳಗನ್ನಡ ಮೂಲ ಆಶಯಗಳಿಗೆ ದಕ್ಕೆ ಬರದಂತೆ ಈ ಲೇಖನದಲ್ಲಿ ಕೆಲವು ಮುಖಗಳನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಪರಾಮರ್ಶನ ಗ್ರಂಥಗಳು :

1. ಸಂ.ರಾಜಪ್ಪ ದಳವಾಯಿ– ಕನ್ನಡ ಸಾಹಿತ್ಯಕೋಶ, ಅವಿಸಂ(ರಿ) ಅನುವನಳ್ಳಿ ತರಿಕೆರೆ.ತಾ.
2. ಸಂ. ಬಿ.ಆರ್. ರಾಮಚಂದ್ರಗೌಡ– ಐಚ್ಛಿಕ ಕನ್ನಡ (ಭಾಗ.1)– ನವೀನಪ್ರಕಾಶನ ಬೆಂಗಳೂರು.
3. ಸಂ. ಓ.ಎಲ್. ನಾಗಭೂಷಣಸ್ವಾಮಿ– ವಿಮರ್ಶೆಯ ಪರಿಭಾಷೆ– ಅಂಕಿತ ಪುಸ್ತಕ, ಬೆಂಗಳೂರು.
4. ಸಂ. ೦.ಸಿ.ನಿಂಗಣ್ಣ– ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ– ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.
5. ರಂ.ಶ್ರೀ. ಮುಗಳಿ– ಕನ್ನಡ ಸಾಹಿತ್ಯ ಚರಿತ್ರೆ– ಪ್ರಕಾಶನ, ಬೆಂಗಳೂರು.
6. ಹಲವಾರು ಮೂಲ ಪಠ್ಯಗಳು: ವಿವಿಧ ಲೇಖಕರು.

*****

**ಡಾ.ವೈ.ಚಂದ್ರಬಾಬು**
ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ,
ಹೂವಿನಹಡಗಲಿ–583219
ಮೊಬೈಲ್ ನಂ: 9449380356
ಇಮೇಲ್–chandrababu.y3@gmail.com